# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಮಧುಗಿರಿ

**ಎಸ್.ಸಿ.ಸಂಖ್ಯೆ:5033/2019 ಪ್ರಾಸಾ-32**

**ಚಾಸಾ-33**

ದಿನಾಂಕ:08-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ವಿಜಯ ಕುಮಾರ |
| ತಂದೆಯ ಹೆಸರು | ಚನ್ನವೀರೆಗೌಡ |
| ವಯಸ್ಸು | 31 |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಕಾರು ನಂಬರ್ ಕೆಎ-03-ಎಂಎಸ್-0500 Fortuner car ನನ್ನ ಮಾಲೀಖತ್ವಕ್ಕೆ ಸೇರಿದ್ದು. 2019 ನೇ ಇಸವಿಯಲ್ಲಿ ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಕಾರನ್ನು ವಶಕ್ಕೆ ತೆಗೆದುಕೊಂಡರು. ನಾನು ಕೇಳಿದಾಗ ಮಧುಗಿರಿ ಠಾಣೆಗೆ ಬನ್ನಿ ಅಲ್ಲಿ ಮಾತನಾಡುತ್ತೇವೆ ಎಂದು ಹೇಳಿದರು. ನಾನು ಎರಡು ದಿನ ಬಿಟ್ಟು ಮಧುಗಿರಿ ಠಾಣೆಗೆ ಹೋದೆ. ವಕೀಲರ ಮೂಲಕ ಕಾರನ್ನು ಬಿಡಿಸಿಕೊಂಡಿದ್ದೇನೆ. ನನ್ನ ವಾಹನವನ್ನು ಯಾವ ಕೃತ್ಯಕ್ಕೆ ಯಾರು ಬಳಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ 1 ರಿಂದ 9 ಮತ್ತು 11 ರಿಂದ 14 ರಲ್ಲಿ ಯಾರೂ ಕೂಡ ನನ್ನ ಕಾರನ್ನು ಬಾಡಿಗೆಗೆ ಪಡೆದಿಲ್ಲ. ಈ ಕೇಸಿಗೆ ಸಂಬಂದಪಟ್ಟ ಹಾಗೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಚಂದ್ರಶೇಖರ್ ಎಂಬುವವರಿಗೆ ಕೂಡ

ಕಾರನ್ನು ಬಾಡಿಗೆಗೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ಈ ಕೇಸಿನ 6 ನೇ ಆರೋಪಿ ಬಸವರಾಜು ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು JCB ಇಟ್ಟುಕೊಂಡಿದ್ದೆ ಬಸವರಾಜು ರವರು ನನ್ನ JCB ಯನ್ನು ಅವರ ಕಾಂಟ್ರಾಕ್ಟೆ ಕೆಲಸಗಳಿಗೆ ಬಾಡಿಗೆಗೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ದಿಃ02-01-2019 ರಂದು ಬಸವರಾಜು ರವರು ನನಗೆ ಫೋನ್ ಮಾಡಿ ಒಂದು ವಾರದ ಮಟ್ಟಿಗೆ ನನ್ನ Fortuner ಕಾರನ್ನು ಕೊಡುವಂತೆ ಕೇಳಿದರು ನಾನೂ ಅದಕ್ಕೆ ಒಪ್ಪಿದೆ ಅದೇ ದಿನ ಅವರ ಹುಡುಗ ಲೋಕೇಶ್ ಅಲಿಯಾಸ್ ಬುಡ್ಡ ನ್ಯಾಯಾಲಯದ ಮುಂದೆ ಇರುವ 11 ನೇ ಆರೋಪಿ ನನ್ನ ಬಳಿ ಬಂದು Fortuner ಕಾರನ್ನು ತೆಗೆದುಕೊಂಡು ಹೋದ ಎಂದರೆ ಸರಿಯಲ್ಲ. ಬಳಿಕ ನನಗೆ ವಿಷಯ ಗೊತ್ತಾಗಿದ್ದೇನೆಂದರೆ 6 ನೇ ಆರೋಪಿಯ ಮಗಳನ್ನು ಚನ್ನರಾಯಪಟ್ಟಣದಿಂದ ಕರೆದುಕೊಂಡು ಬರಲು ನನ್ನ ಕಾರನ್ನು ಉಪಯೋಗಿಸಿದ್ದರು ಎಂದರೆ ಸರಿಯಲ್ಲ. ಬಳಿಕ ಅವರ ಮಗಳನ್ನು ಕರೆದುಕೊಂಡು ಹೋದ ವ್ಯಕ್ತಿಯನ್ನು ಆರೋಪಿಗಳು ಕೊಲೆ ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಆರೋಪಿ ಕಾರನ್ನು ಠಾಣೆಯಲ್ಲಿ ಬಿಡಿಸಿಕೊಳ್ಳುವಾಗ ಈ ವಿಚಾರ ಗೊತ್ತಾಯಿತು ಎಂದು ನುಡಿಯುತ್ತಾರೆ. ಈ ಕೇಸಿಗೆ ಸಂಬಂದಪಟ್ಟ ಹಾಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಮತ್ತು ಆ ಹೇಳಿಕೆಯಲ್ಲಿ 6 ನೇ ಆರೋಪಿ ನನ್ನ ಕಾರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಪೊಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿಃ23-03-2019 ರ ತನ್ನ ಹೇಳಿಕೆ ಎಂದು ಹೇಳಲಾದ ಹೇಳಿಕೆಯಲ್ಲಿ "ಬೆಂಗಳೂರಿನ .................................. ತೆಗೆದುಕೊಂಡು ಹೋಗಿದ್ದರಂತೆ" ಎಂಬ ಭಾಗವನ್ನು ನಿರಾಕರಿಸಿದ ಕಾರಣ ಸದರಿ ಭಾಗವನ್ನು ನಿಪಿ-65

ಎಂದು ಗುರುತಿಸಲಾಯಿತು. 6 ನೇ ಆರೋಪಿ ನನಗೆ ಪರಿಚಿತನಾಗಿದ್ದು ಅವರಿಗೆ ನಾನು ನನ್ನ ಕಾರನ್ನು ನೀಡಿದ್ದೇನೆ ಮತ್ತು ನಿಲೀಡಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿದೆ ನೀಡಿದ್ದರೂ ನೀಡಿಲ್ಲ ಎಂದು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ.ಟಿ ಎಸ್ ಕೆ ಎಲ್ಲಾ ಆರೋಪಿ ಪರವಾಗಿ:-**

ಠಾಣೆಯಲ್ಲಿ ಪೊಲೀಸರು ಆರೋಪಿಗಳು ನನ್ನ ಕಾರನ್ನು 6 ನೇ ಆರೋಪಿಯ ಮಗಳನ್ನು ಚನ್ನರಾಯಪಟ್ಟಣದಿಂದ ಕರೆದುಕೊಂಡು ಬರಲು ಉಪಯೋಗಿಸಿದ್ದರು ಎಂದು ನನ್ನಲ್ಲಿ ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಮಧುಗಿರಿ.**